**O.S. No. 238/2015**
**PW-1**

ದಿನಾಂಕ: 14-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಂ.ಆರ್.ಹೆಚ್. ವಕೀಲರಿಂದಃ</u>

ನಿಮ್ಮ ತಂದೆ ಸೋಮಶೆಟ್ಟಿ ರವರಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ಅನ್ನು ಹೊರತುಪಡಿಸಿ ಬೇರೆ ಜಮೀನು ಇಲ್ಲ ಎಂದರೆ ಸರಿ. ನಿಮ್ಮ ತಂದೆ ಸೋಮಶೆಟ್ಟಿ ರವರು ದಾವಾ ತಪಶೀಲ ಆಸ್ತಿ 1 ರಲ್ಲಿನ ಕಾಡು ಕಡೆದು, ಹಸನು ಮಾಡಿ ಉಳುಮೆ ಗೆ ಯೋಗ್ಯ ಮಾಡಿರುತ್ತಾರೆ ಎಂದರೆ ಸಾಕ್ಷಿ ಇಲ್ಲಾ ನಾವೆಲ್ಲ ಸೇರಿ ಮಾಡಿರುತ್ತೇವೆ ಎಂದು ಹೇಳುತ್ತಾರೆ. ನಾವೆಲ್ಲರೂ ಸೇರಿ ದಾವಾ ತಪಶೀಲು ಆಸ್ತಿ 1 ಅನ್ನು ಕಾಡು ಕಡೆದು, ಹಸನು ಮಾಡಿ ಉಳುಮೆ ಗೆ ಯೋಗ್ಯ ಮಾಡಿರುತ್ತೇವೆ ಎಂದು ದಾವೆ ಹೂಡುವ ಕಾಲಕ್ಕೆ ವಕೀಲರಿಗೆ ತಿಳಿಸಿರುತ್ತೇನೆ. ವಾದ ಪತ್ರದಲ್ಲಿ ದಾವೆ ಹೂಡುವ ಕಾಲಕ್ಕೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ಪಿತ್ರಾರ್ಜಿತ ಆಸ್ತಿ ಎಂದು ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ನಾನು ಅನಕ್ಷರಸ್ತೆ ಆಗಿರುವುದರಿಂದ ಜ್ಞಾಪಕ ಇಲ್ಲ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ನಿಮ್ಮ ತಂದೆಯ ಹೆಸರಿಗೆ ಸಾಗುವಳಿ ಇದೆ ಎಂದರೆ ಸರಿ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ಸಹ ನಿಮ್ಮ ತಂದೆ ಯ ಹೆಸರಿಗೆ ಸಾಗುವಳಿ ಆಗಿರುವುದರಿಂದ ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸಾಕ್ಷಿ ಒಟ್ಟು ಕುಟುಂಬದ ಆಸ್ತಿ ಎನ್ನುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ದಾವಾ ತಪಶೀಲು ಆಸ್ತಿ ಸಂಖ್ಯೆ 1 ನಿಮ್ಮ ತಂದೆಯ ಹೆಸರಿಗೆ ಸಾಗುವಳಿ ಬರುವ ಕಾಲಕ್ಕೆ ನಿಮಗೆ ಎಷ್ಟು ವಯಸ್ಸು ಆಗಿತ್ತು ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸಾಗುವಳಿ ನೀಡುವ ಕಾಲಕ್ಕೆ ನೀವು ಮಕ್ಕಳು ಎಂದರೆ ಸಾಕ್ಷಿ 12 ವರ್ಷ ಆಗಿತ್ತು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಆದಾಯದಿಂದಲೇ ನಿಮ್ಮ ತಂದೆ ಕುಟುಂಬದ ಹಾಗೂ ನಿಮ್ಮಗಳ ನಿರ್ವಹಣೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಇಲ್ಲ, ಎಲ್ಲರೂ ಒಟ್ಟಿಗೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಆದಾಯದಿಂದಲೇ ನಿಮ್ಮ ಮದುವೆ ಕೂಡ ಮಾಡಲಾಗಿದೆ ಎಂದರೆ ಸರಿಯಲ್ಲ.

8 ನೇ ಪ್ರತಿವಾದಿ ದಾವಾ ತಪಶೀಲು ಆಸ್ತಿ ಸಂಖ್ಯೆ 1 ರಲ್ಲಿ 2012 ರಲ್ಲಿ ಒಂದು ವರ್ಷ ಮಾತ್ರ 2 ಎಕರೆ 20 ಗುಂಟೆ ಉಳುಮೆ ಮಾಡಿರುತ್ತಾರೆ. ಯಾವ ಆಧಾರದ ಮೇಲೆ ಪ್ರತಿವಾದಿ 8 ರವರು ಉಳುಮೆ ಮಾಡಿದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಿಮ್ಮ ತಂದೆ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ನಿಮ್ಮ ತಂದೆ ಎಷ್ಟು ಎಕರೆ ಮಾರಾಟ ಮಾಡಿದ್ದರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ 2-20 ಎಕರೆ ಎಂದು ಹೇಳಿದರು ಎಂದು ಹೇಳುತ್ತಾರೆ. ನಿಮ್ಮ ತಂದೆ ಮಾರಾಟ ಮಾಡಿದರು ಎಂದು ಹೇಳಲಾದ ಕ್ರಯ ಪತ್ರವನ್ನು ತೆಗೆದು ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿದ್ದೇನೆ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರ ಯಾವ ವರ್ಷ ತಿಂಗಳು ಮತ್ತು ತಾರೀಖಿನಂದು ತಯಾರು ಮಾಡಲಾಗಿದೆ ಎಂದರೆ ಸಾಕ್ಷಿ ಜ್ಞಾಪಕ ಇಲ್ಲ ಎಂದು ಹೇಳುತ್ತರೆ. ಯಾವ ವಿಚಾರವಾಗಿ ನಿಮ್ಮ ತಂದೆ ಮಾರಾಟ ಮಾಡಿದ್ದರು ಎಂದು ಕ್ರಯಪತ್ರವನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನಗೆ ಓದುಲು ಬರುವುದಿಲ್ಲ, ತಿಳಿದುಕೊಂಡಿಲ್ಲ ಎಂದು ಹೇಳುತ್ತಾರೆ. ನಿಮ್ಮ ತಂದೆ ಹಾಗೂ 2 ನೇ ಪ್ರತಿವಾದಿಯ ಗಂಡನೊಂದಿಗೆ ಒಟ್ಟಾಗಿ ದಿಃ 29.03.2010 ರಂದು 8 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಪತ್ರ ಮಾಡಿಕೊಡುತ್ತಾರೆ ಎಂದರೆ ಸಾಕ್ಷಿ ನೋಡಿಲ್ಲ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರದಂತೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಪೈಕಿ 1 ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ನೋಡಿಲ್ಲ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಿಮ್ಮ ತಂದೆ ಹಾಗೂ 2 ನೇ ಪ್ರತಿವಾದಿಯ ಗಂಡನೂಂದಿಗೆ ರೂ. 1,80,000/- ಕ್ರಯದ ಮೊಬಲಗನ್ನು ಪಡೆದು ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಸಾಕ್ಷಿ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ಸದರಿ ಕ್ರಯ ಪತ್ರದಲ್ಲಿ ನಿಮ್ಮ ತಂದೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ಅನ್ನು ತನ್ನ ಸ್ವಯಾರ್ಜಿತ ಆಸ್ತಿ ಎಂದು ಬರೆಸಿ 2 ನೇ ಪ್ರತಿವಾದಿಯ ಗಂಡನೊಂದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2010 ರಲ್ಲಿ ನಿಮ್ಮ ಮದುವೆಯಾಗಿತ್ತಾ ಎಂದರೆ ಸಾಕ್ಷಿ 1995 ರಲ್ಲಿ ಆಗಿತ್ತು ಎಂದು ಹೇಳುತ್ತಾರೆ. ವಾದಪತ್ರ ತಯಾರಿಸುವ ಕಾಲಕ್ಕೆ ವಕೀಲರಿಗೆ ವಯಸ್ಸನ್ನು 38 ಎಂದು ತಿಳಿಸಿರುತ್ತೇನೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ರಿಂದ ಬಂದಂತಹ ಆದಾಯ ಮನೆ ನಿರ್ವಹಣೆಗೆ ಹಾಗೂ ನಿಮ್ಮಗಳ ಪೋಷಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮನೆ ನಿರ್ವಹಣೆಗೆ ಹಾಗೂ ನಿಮ್ಮಗಳ ಪೋಷಣೆಗೆ ಆದಾಯ ಸಾಕಾಗುತ್ತಿಲ್ಲ ಎಂಬ ಕಾರಣಕ್ಕಾಗಿ

ಮೃತ ನಿಮ್ಮ ತಂದೆ ಊರಿನಲ್ಲಿ ದಾವಾ ತಪಶೀಲು ಆಸ್ತಿ ಸಂಖ್ಯೆ1 ರಲ್ಲಿ 1 ಎಕರೆ ಮಾರಾಟ ಮಾಡವುದಾಗಿ ಪ್ರಚಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ರಚಾರದಂತೆ 8 ನೇ ಪ್ರತಿವಾದಿ ವ್ಯಾಪಾರ ಮಾಡಲು ಮಾತುಕತೆಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ಪ್ರಚಲಿತ ಮಾರುಕಟ್ಟೆ ಬೆಲೆಯಂತೆ ರೂ. 1,80,000/- ಗಳಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ1 ರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಲು ನಿಮ್ಮ ತಂದೆ ಹಾಗೂ 2 ನೇ ಪ್ರತಿವಾದಿಯ ಗಂಡ ಮಾತುಕತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಾತುಕತೆಯಂತೆ ನಿಮ್ಮ ತಂದೆ, ಮೃತ ನಿಮ್ಮ ತಮ್ಮ ಮಹದೇವ ಹಾಗೂ ಸಾಕ್ಷಿದಾರರು 8 ನೇ ಪ್ರತಿವಾದಿಯೊಂದಿಗೆ ತಾಲೂಕು ಕಛೇರಿ ಬಳಿ ಬಂದು ಪತ್ರ ಬರಹಗಾರರಾದ ಹೆಚ್.ಆರ್. ಜಗದೀಶ್ ರವರಿಂದ ಕ್ರಯ ಪತ್ರವನ್ನು ತಯಾರಿಸಿ, ನೋಂದಣಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ. ನಿಮ್ಮ ತಂದೆ ಹಾಗೂ ಮೃತ ನಿಮ್ಮ ತಮ್ಮ ಮಹದೇವ ಮನೆ ಖರ್ಚಿನ ಅವಶ್ಯಕತೆ ಗಾಗಿ ದಾವಾ ತಪಶೀಲು ಆಸ್ತಿ ಸಂಖ್ಯೆ1 ರಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ನಿಮ್ಮ ತಂದೆಗೆ ಸ್ವಯಾರ್ಜಿತ ಆಸ್ತಿ ಯಾಗಿರುವುದರಿಂದ ಅದನ್ನು ಮಾರಾಟ ಮಾಡುವ ಹಕ್ಕು ಅವರಿತ್ತು ಎಂದರೆ ಸರಿಯಲ್ಲ. ನಿಮ್ಮ ತಂದೆ ಹಾಗೂ ಮೃತ ನಿಮ್ಮ ತಮ್ಮ ಮಹದೇವ ನೋಂದಣಿ ಮಾಡಿಕೊಟ್ಟ ಕ್ರಯಪತ್ರದಂತೆ ಇಂದಿಗೂ 8 ನೇ ಪ್ರತಿವಾದಿ ದಾವಾ ತಪಶೀಲು ಆಸ್ತಿ ಸಂಖ್ಯೆ1 ರಲ್ಲಿ 1 ಎಕರೆ ಜಮೀನನ್ನು ತಮ್ಮ ಹೆಸರಿಗೆ ಖಾತೆ ಪಹಣಿ ಮಾಡಿಸಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ರಲ್ಲಿ ಪಾಲು ಕೇಳಲು ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಮ್ಮ ತಂದೆ ಕುಡಿತದ ಚಟಕ್ಕೆ ಒಳಗಾಗಿದ್ದರು, ಹಾಗೂ ಕುಡಿತ ಮಾಡಿ ವ್ಯವಹಾರ ಮಾಡಿದ ವಿಚಾರವನ್ನು ನೋಡಿದವರು ನಿಮ್ಮ ಊರಿನಲ್ಲಿ ಯಾರಾದರೂ ಇದ್ದರಾ ಎಂದರೆ ಸಾಕ್ಷಿ ಒಂದಿಬ್ಬರು ಇದ್ದಾರೆ ಎಂದು ಹೇಳುತ್ತಾರೆ. ಅವರುಗಳೆಂದರೆ ರುದ್ರ ಅವರ ತಂದೆಯ ಹೆಸರು ಮರೆತಿದ್ದೇನೆ, ಅವರಿಗೆ 45 ವರ್ಷ ವಯಸ್ಸು, ಮತ್ತು ಇನ್ನೊಬ್ಬರಾದ ಲೋಕೇಶ ತಂದೆ ಮರಿಶೆಟ್ಟಿ ಈಗ ತೀರಿಕೊಂಡಿರುತ್ತಾರೆ.

ನಿಮ್ಮ ತಂದೆ ಬದುಕಿದ್ದಾಗ ಅವರ ಕುಡಿತದ ಚಟಕ್ಕೆ ಬಲಿಯಾಗಿರಲಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯ ನ್ನು ಹೊಡೆದುಕೊಳ್ಳಲು ನಿಮ್ಮ ತಂದೆ ಕುಡಿತದ ಚಟಕ್ಕೆ ಬಲಿಯಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ. ನಿಮ್ಮ ತಂದೆ ಹಾಗೂ ಮೃತ ತಮ್ಮ ಮಹದೇವ ಕ್ರಯಪತ್ರದಂತೆ ಎಷ್ಟು ಎಕರೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ 2 ಎಕರೆ 20 ಗುಂಟೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿ ಗುರುಪುರದಲ್ಲಿ ವಾಸವಾಗಿದ್ದಾನೆ. 4 ನೇ ಪ್ರತಿವಾದಿ, 3 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 4 ನೇ ಪ್ರತಿವಾದಿಗೆ ದಿಮ್ಮ ತಂದೆ ದಾವಾ ತಪಶೀಲು ಆಸ್ತಿ ಸಂಖ್ಯೆ1 ರ ಪೈಕಿ 1 ಎಕರೆ20 ಗುಂಟೆ ಜಮೀನನ್ನು ದಿಃ 04.05.2007 ರಲ್ಲಿ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 3, 4 ನೇ ಪ್ರತಿವಾದಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ, ತೊಂದರೆ ಕೊಡುತ್ತಿದ್ದ ಎಂಬ ಕಾರಣಕ್ಕಾಗಿ ನಿಮ್ಮ ತಂದೆ ಪ್ರತಿವಾದಿ 4 ರವರಿಗೆ ದಾನ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಚೆನ್ನಾಗಿದ್ದಾರೆ ಎಂದು ಹೇಳುತ್ತಾರೆ. ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಪೈಕಿ 1 ಎಕರೆ 20 ಗುಂಟೆ ಜಮೀನು 4 ನೇ ಪ್ರತಿವಾದಿಯ ಹೆಸರಿಗೆ ಖಾತೆ ವರ್ಗಾವಣೆ ಮತ್ತು ಅವರ ಸ್ವಾಧೀನಾನುಭವದಲ್ಲಿಯೇ ಇದೆ ಎಂದರೆ ಸರಿಯಲ್ಲ.

8 ನೇ ಪ್ರತಿವಾದಿ ದಾವೆಗೆ ಸಲ್ಲಿಸಿದ ಪ್ರತಿವಾದ ಅಂಶವನ್ನು ವಕೀಲರ ಮುಖೇನ ಹೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ 4 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಪೈಕಿ 1 ಎಕರೆ 20 ಗುಂಟೆ ಜಮೀನನ್ನು ದಾನ ಪತ್ರ ಮಾಡಿಕೊಟ್ಟ ವಿಚಾರವನ್ನು ಏಕೆ ಹೇಳಿಲ್ಲ ಎಂದರೆ ಸಾಕ್ಷಿ ನಾವು ಮಾಡಿಕೊಟ್ಟಿಲ್ಲ, ನಮಗೆ ಗೊತ್ತಿಲ್ಲದಿದ್ದರಿಂದ ಹೇಳಿಲ್ಲ ಎಂದು ಹೇಳುತ್ತಾರೆ. ದಾನ ಪತ್ರದ ಆಧಾರದ ಮೇಲೆ 4 ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ1 ರ ಪೈಕಿ 1 ಎಕರೆ 20 ಗುಂಟೆ ಜಮೀನನ್ನು ಖಾತೆ ಮಾಡಿಸಿಕೊಂಡು ದಿಃ 13.09.2010 ರಂದು ಪ್ರತಿವಾದಿ 8 ರವರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮೋಸದಿಂದ ಮಾಡಿರುತ್ತಾರೆ ಎಂದು ಹೇಳುತ್ತಾರೆ.

ನಿಮಗೆ ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ರ ಪೈಕಿ 1 ಎಕರೆ 20 ಗುಂಟೆ ಜಮೀನನ್ನು ದಾನಪತ್ರದ ಮುಖೇನ ತನ್ನ ಹೆಸರಿಗೆ ಮಾಡಿಕೊಂಡ ವಿಚಾರ ಹಾಗೂ ಅದನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರ ದಾವೆ ಹೂಡುವ ಕಾಲಕ್ಕೆ ಗೊತ್ತಿತ್ತು ಎಂದರೆ ಸಾಕ್ಷಿ ಮೋಸದಿಂದ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. ಸದರಿ ವಿಚಾರ ನಿಮಗೆ ಮಾಹಿತಿ ಇದ್ದುದರಿಂದಲೇ ದಾವಾ ತಪಶೀಲು ಆಸ್ತಿ ಸಂಖ್ಯೆ1 ರ ಪೈಕಿ

1 ಎಕರೆ 20 ಗುಂಟೆ ಆಸ್ತಿಯನ್ನು ಕೈ ಬಿಟ್ಟದ್ದೀರಿ ಎಂದರೆ ಸಾಕ್ಷಿ ಎಲ್ಲವನ್ನು ಸೇರಿಸಿಯೇ ಹೂಡಿದ್ದೇನೆ ಎಂದು ಹೇಳುತ್ತಾರೆ. ನಿನಗೆ ನಿಮ್ಮ ತಂದೆ 4 ನೇ ಪ್ರತಿವಾದಿಗೆ ದಾವಾ ತಪಶೀಲು ಆಸ್ತಿ ಸಂಖ್ಯೆ1 ರ ಪೈಕಿ 1 ಎಕರೆ 20 ಗುಂಟೆ ದಾನ ಮಾಡಿದ ವಿಚಾರ ಒಪ್ಪಿಗೆ ಇದೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಹಾಗೂ ಮೃತ ಮಹದೇವ ದಾವಾ ತಪಶೀಲು ಆಸ್ತಿ ಸಂಖ್ಯೆ 1 ರಲ್ಲಿ 8 ನೇ ಪ್ರತಿವಾದಿ ಪರವಾಗಿ ಮಾರಾಟ ಮಾಡಿದ 1 ಎಕರೆ ಜಮೀನಿನ ಕ್ರಯ ಪತ್ರವು ಒಪ್ಪಿಗೆ ಇದೆ ಎಂದರೆ ಸರಿಯಲ್ಲ. ನಿಮ್ಮ ತಂದೆ ದಾವಾ ತಪಶೀಲು ಆಸ್ತಿ ಸಂಖ್ಯೆ 1 ತನ್ನ ಸ್ವಯಾರ್ಜಿತ ಆಸ್ತಿಯಾದ್ದರಿಂದ ಅದನ್ನು ಮಾರಾಟ ಮಾಡಲು ಮತ್ತು ದಾನಪತ್ರ ಮಾಡಲು ಹಕ್ಕಿದೆ ಎಂದರೆ ಸರಿಯಲ್ಲ.

ದಾವೆಯಲ್ಲಿ ಕೇಳಿರುವಂತೆ ದಾವಾ ತಪಶೀಲು ಆಸ್ತಿ ಸಂಖ್ಯೆ1 ರಲ್ಲಿ ಪಾಲು ಕೇಳುವ ಹಕ್ಕು ನಿಮಗಿಲ್ಲ ಎಂದರೆ ಸರಿಯಲ್ಲ. ನೀವು ಹಾಗೂ ಪ್ರತಿವಾದಿ 1 ರಿಂದ 7 ರವರು ಅನ್ಯೋನ್ಯವಾಗಿ, ಚೆನ್ನಾಗಿದ್ದೀರಿ ಎಂದರೆ ಅಷ್ಟೇನೂ ಚೆನ್ನಾಗಿಲ್ಲ ಎಂದು ಹೇಳುತ್ತಾರೆ. ಈಗಲೂ ಹಬ್ಬ-ಹುಣ್ಣಿಮೆಗೆ ನೀವುಗಳು ಒಟ್ಟಾಗಿ ಸೇರುತ್ತೀರಾ ಎಂದರೆ ಸರಿಯಲ್ಲ. ನೀವು ಪ್ರತಿವಾದಿ 1 ರಿಂದ 7 ರವರು ಒಟ್ಟಾಗಿ 2012 ರಲ್ಲಿ ವಕೀಲರ ಕಛೇರಿಗೆ ಹೋಗಿ ದಾವೆ ತಯಾರಿಸಲು ಮಾಹಿತಿ ನೀಡಿರುತ್ತೀರಿ ಎಂದರೆ ಸರಿಯಲ್ಲ. ನಾನೇ ಹೋಗಿರುತ್ತೇನೆ ಎನ್ನುತ್ತಾರೆ. ಆದಕಾರಣ, ನಿಮ್ಮ ಮಾವ 4 ನೇ ಪ್ರತಿವಾದಿಗೆ ದಾನ ಪತ್ರ ಮಾಡಿಕೊಟ್ಟ ವಿಚಾರ ಹಾಗೂ 4 ನೇ ಪ್ರತಿವಾದಿ, 8 ನೇ ಪ್ರತಿವಾದಿಗೆ ನೋಂದಣಿ ಕ್ರಯ ಪತ್ರ ಮಾಡಿಕೊಟ್ಟ ವಿಚಾರವನ್ನು ಮರೆ ಮಾಚಿರುತ್ತೀರಿ ಎಂದರೆ ಸರಿಯಲ್ಲ. ನೀವು ಹಾಗೂ ಪ್ರತಿವಾದಿಗಳು 1 ರಿಂದ 7 ಅನ್ಯೋನ್ಯವಾಗಿಲ್ಲದೇ ಇದ್ದಿದ್ದರೇ 4 ನೇ ಪ್ರತಿವಾದಿಗೆ ಮಾಡಿಕೊಟ್ಟ ದಾನ ವಿಚಾರ ಹಾಗೂ 4 ನೇ ಪ್ರತಿವಾದಿ ಮಾರಾಟಮಾಡಿದ ವಿಚಾರವನ್ನು ನಿಮ್ಮ ವಕೀಲರಿಗೆ ಮಾಹಿತಿ ನೀಡುತ್ತಿದ್ದೀರಿ ಎಂದರೆ ಸರಿಯಲ್ಲ. ನಿ.ಡಿ 1 ರಂತೆ ದಾನಪತ್ರ ಆದ ವಿಚಾರ ನಿಮಗೆ ಯಾವ ಗೊತ್ತಾಯಿತು ಎಂದರೆ ಸಾಕ್ಷಿ 8 ನೇ ಪ್ರತಿವಾದಿ ದಾವೆಯಲ್ಲಿ ಹೇಳಿದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ದಾನ ಪತ್ರದ ಮೇಲೆ ನೀವು ನ್ಯಾಯಾಲಯ ದಲ್ಲಿ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿ ಅದರ ಬಗ್ಗೆ ಕೇಳಿಲ್ಲ ಒಟ್ಟಿಗೆ ಹಾಕಿದ್ದರಿಂದ ಕೇಳಿಲ್ಲ ಎಂದು ಹೇಳುತ್ತಾರೆ. ದಿಃ 29.03.2010 ರಂದು ನಿಮ್ಮ ತಂದೆ ಹಾಗೂ ಮೃತ ಮಹದೇವ 8 ನೇ ಪ್ರತಿವಾದಿಗೆ ಮಾಡಿಕೊಟ್ಟ ಕ್ರಯ ಪತ್ರ 2 ಎಕರೆ 20 ಗುಂಟೆ ಅಲ್ಲ, 1 ಎಕರೆ ಎಂದರೆ ಸಾಕ್ಷಿಯು 8 ನೇ ಪ್ರತಿವಾದಿ ಹೇಳಿದಾಗ ನನಗೆ

ಗೊತ್ತಾಯಿತು  ಎಂದು ಹೇಳುತ್ತಾರೆ.

ಮುಂದುವರೆದ ಮುಖ್ಯ ವಿಚಾರಣೆಃ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.